ದಿನಾಂಕ 23-08-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಸಸಅ ರವರಿಂದ

ನಂತರ ಪೊಲೀಸರು ನಮ್ಮ ಮನೆಯಲ್ಲಿ ಕಳುವಾಗಿದ್ದ 5 ಗ್ರಾಂ ಬಂಗಾರದ ಚೈನನ್ನು ನನಗೆ ವಾಪಸ ನೀಡಿರುತ್ತಾರೆ. ಸಾಕ್ಷಿದಾರರು ಸದರಿ ಚೈನನ್ನು ಈ ದಿನ ನ್ಯಾಯಾಲಯಕ್ಕೆ ತಂದಿದ್ದು, ಸದರಿ ಚೈನನ್ನು ಮು ಮಾ 1 ಎಂದು ಹಾಗೂ ಸದರಿ ಫೊಟೋವನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪಿರ್ಯಾದಿಯನ್ನು ಗುರುತಿಸಿದ್ದರಿಂದ ಪಿರ್ಯಾದಿಯನ್ನು ನಿಪಿ-2 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಒಂದು ಫೊಟೋವನ್ನು ನೋಡಿ ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಬಲದಿಂದ ಮೂರನೆಯವನು ನಾನೇ ಎಂದು ನುಡಿಯುತ್ತಾರೆ. ನಿಪಿ-3 ನ್ನು ನಮ್ಮ ಮನೆಯ ಮುಂದೆ ದಿಃ 24.12.2017 ರಂದು ಆರೋಪಿತರನ್ನು ಕರೆದುಕೊಂಡು ಬಂದಾಗ ತೆಗೆದಿರುತ್ತಾರೆ. ಆರೋಪಿತರ ಹೆಸರುಗಳು ನನಗೆ ಪೊಲೀಸರು ಹೇಳಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಆರೋಪಿತರನ್ನು ವಿಸಿ

ಮೂಲಕ ನೋಡಿ ಗುರುತಿಸಿರುತ್ತಾರೆ. ನಾನು ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 1ನೇ ಆರೋಪಿತರ ಪರ ಶ್ರೀ. ಎಚ್ ಎನ್ ಡಿ ವಕೀಲರಿಂದಃ**

ನಾನು ಊರಿಗೆ ಹೋದಾಗ ನಮ್ಮ ಮನೆ ಕಳುವಾಗಿರುತ್ತದೆ. ಆ ಸಮಯದಲ್ಲಿ ನಾವು ಮನೆಗೆ ಕಿಲಿ ಹಾಕಿಕೊಂಡು ಹೋಗಿದ್ದೇವು. ನಮ್ಮ ಪಕ್ಕದ ಮನೆಯವರು ನಮಗೆ ಕಳುವಾದ ಬಗ್ಗೆ ತಿಳಿಸಿದ ನಂತರ ನಾವು ಮನೆಗೆ ವಾಪಸ ಬಂದೇವು. ಸದರಿ ನಮ್ಮ ಓಣಿಯಲ್ಲಿ ಒಂದಕ್ಕೊಂದು ಮನೆಗಳು ಹೊಂದಿಕೊಂಡು ಇರುತ್ತವೆ ಎಂದು ಸೂಚಿಸಿದರೆ ಸರಿ . ನಾವು ಮನೆಗೆ ಬಂದಾಗ ನಮ್ಮ ಮನೆಯ ಕೀಲಿಯನ್ನು ಒಡೆದು ತೆರವುಗೊಳಿಸಲಾಗಿತ್ತು ಹಾಗೂ ನಮ್ಮ ಮನೆಯ ಕೀಲಿ ಅಲ್ಲಿ ಇರಲಿಲ್ಲ. ನಮ್ಮ ನೆರೆಹೊರೆಯವರಾದ ಚಾಸಾ 9 ರವರು ನಮ್ಮ ಮನೆಯಲ್ಲಿ ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ, ನಾವು ಊರಿಗೆ ಹೋದ ವಿಷಯ ಅವರಿಗೆ ಗೊತ್ತಿದ್ದರಿಂದ ತೆರವುಗೊಳಿಸಿದ್ದನ್ನು ನೋಡಿ ಅವರಿಗೆ ಕಳ್ಳತನ ಆಗಿದೆ ಎಂದು ಅನಿಸಿರಬಹುದು. ನಾನು ನನಗೆ ವಿಷಯ ತಿಳಿದ ತಕ್ಷಣವೇ ವಾಪಸ ಬಂದಿರುತ್ತೇನೆ. ನಮ್ಮ ನೆರೆಹೊರೆಯವರು ಪೊಲೀಸರಿಗೆ ತಿಳಿಸಿರಬಹುದು. ನಾನು ವಾಪಸ ಮನೆಗೆ ಬಂದಾಗ ಮುಂಜಾನೆ 10.00 ಗಂಟೆ ಆಗಿತ್ತು. ನಾನು ಬಂದ ನಂತರ ನಮ್ಮ ನೆರೆಹೊರೆಯವರು ಪೊಲೀಸರು ಬರುವವರೆಗೂ ಮನೆಯ ಒಳಗೆ ಹೋಗುವುದು ಬೇಡ ಎಂದು ಹೇಳಿದ್ದರಿಂದ ನಾವ್ಯಾರು ಮನೆಯ ಒಳಗೆ ಹೋಗಿರುವುದಿಲ್ಲ. ಪೊಲೀಸರು ಬಂದ ನಂತರ ಮನೆಯ ಒಳಗೆ ಹೋಗಿ ತದ ನಂತರ ನಾನು ಪಿರ್ಯಾದಿಯನ್ನು ದಾಖಲಿಸಿರುತ್ತೇನೆ. ನಾನು ಬರುವ ಮೊದಲು ಪೊಲೀಸರು ನಮ್ಮ ಮನೆಯ ಒಳಗೆ ಹೋಗಿರಲಿಲ್ಲ. ಪೊಲೀಸರು ನಮ್ಮ ಮನೆಯ ಪಂಚನಾಮೆಯನ್ನು ಮಾಡಿರುತ್ತಾರೆ. ನಮ್ಮ ಮನೆಗೆ ಯಾವ ಕಂಪನಿಯ ಕೀಲಿಯನ್ನು ಹಾಕಿದ್ದೇವೆಂದು ನನಗೆ ನೆನಪಿಲ್ಲ. ಪೊಲೀಸರು ಮೊದಲು ಆರೋಪಿತರನ್ನು ನಮ್ಮ ಮನೆಗೆ ಕರೆದಕೊಂಡು ಬಂದಿದ್ದರು, ತದನಂತರ ನಾವು ಪೊಲೀಸ ಠಾಣೆಗೆ ಹೋಗಿರುತ್ತೇವೆ. ನಾನು

ನನ್ನ ಚೈನನ್ನು ಮೊದಲು ನ್ಯಾಯಾಲಯದಲ್ಲಿ ನೋಡಿರುತ್ತೇನೆ. ನಂತರ ಪೊಲೀಸ ಠಾಣೆಯಲ್ಲಿ ಪೊಲೀಸರು ತೋರಿಸಿರುತ್ತಾರೆ. ಪೊಲೀಸರು ನನ್ನ ಚೈನನ್ನು ಯಾರ ಕಡೆಯಿಂದ ಜಪ್ತ ಮಾಡಿರುತ್ತಾರೆಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಮು ಮಾ 1 ನ್ನು ಆರೋಪಿತರಿಂದ ಜಪ್ತ ಮಾಡಿಲ್ಲ ಎಂದು ಸೂಚಿಸಿದರೆ ಅದು ಪೊಲೀಸರಿಗೆ ಗೊತ್ತು. ನನ್ನ ಪಿರ್ಯಾದಿಯಲ್ಲಿ ಯಾರೋ ಒಬ್ಬರು ನಮ್ಮ ಮನೆಯಲ್ಲಿ ಕಳುವು ಮಾಡಿದ್ದಾರೆ ಎಂದು ಬರೆಸಿದ್ದೇನೆ ಎಂದು ಸೂಚಿಸಿದರೆ ಸರಿ . ನಿಪಿ-3 ಫೋಟೋವನ್ನು ಪೊಲೀಸರು ಆರೋಪಿಗಳು ಏನು ಮಾಡದೇ ಇದ್ದರೂ ಸಹಿತ ನಮ್ಮ ಮನೆ ಮುಂದೆ ನಿಲ್ಲಿಸಿ ಫೋಟೋ ತೆಗೆದಿದ್ದಾರೆ ಎಂದು ಸೂಚಿಸಿದರೆ ಸಾಕ್ಷಿಯು ಅದು ಪೊಲೀಸರಿಗೆ ಗೊತ್ತು ಎಂದು ನುಡಿಯುತ್ತಾರೆ. ಆ ದಿನ ಯಾರು ಛಾಯಗ್ರಾಹಕರು ಇದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ನಮ್ಮ ಮನೆಯನ್ನು ಕಳ್ಳತನ ಮಾಡಿಲ್ಲ ಎಂದು ಸೂಚಿಸಿದರೆ ನನಗೆ ಗೊತ್ತಿಲ್ಲ ಪೊಲೀಸರಿಗೆ ಗೊತ್ತು.

2ನೇ ಆರೋಪಿತರ ಪರ ವಕೀಲರು ಮೆಲೀನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.